0103/2043/0522

I Semester 3 Year LL.B./V Semester 5 Year B.A., LL.B. (Maj.-Min. System)/ V Semester 5 Year B.A., LL.B./B.B.A., LL.B. Examination, Nov./Dec. 2020
LAW OF TORTS (Old and New Batch)

Duration : 3 Hours Max. Marks : 100

Instructions : 1. **Answer Q.No. 9 and any five of the remaining questions.**
ಪ್ರಶ್ನೆ 9 ಹಾಗೂ ಉಳಿದ ಯಾವುದಾದರೂ ಐದು ಪ್ರಶ್ನೆಗಳನ್ನು ಉತ್ತರಿಸಿರಿ.

2. **Q.No. 9 carries 20 marks and the remaining questions carry 16 marks each.**
ಪ್ರಶ್ನೆ ಸಂಖ್ಯೆ 9 ಕ್ಕೆ 20 ಅಂಕಗಳು ಉಳಿದ ಪ್ರತಿ ಪ್ರಶ್ನೆಗಳಿಗೆ 16 ಅಂಕಗಳು.

3. **Answers should be written either in English or Kannada completely.**
ಉತ್ತರಗಳನ್ನು ಸಂಪೂರ್ಣವಾಗಿ ಆಂಗ್ಲದಲ್ಲಿ ಅಥವಾ ಕನ್ನಡದಲ್ಲಿಯೇ ಬರೆಯಿರಿ.

Q. No. 1. "Every injury leads to damage but every damage is not an injury". Discuss the statement in the light of decided cases. Marks : 16

'ಪ್ರತಿಯೊಂದು ನಷ್ಟವು ಹಾನಿಯನ್ನು, ವ್ಯಕ್ತಪಡಿಸುತ್ತದೆ ಆದರೆ ಪ್ರತಿಯೊಂದು ಹಾನಿಯು ನಷ್ಟವನ್ನು ವ್ಯಕ್ತಪಡಿಸುವುದಿಲ್ಲ.' ಈ ಹೇಳಿಕೆಯನ್ನು ಪ್ರಮುಖ ಪ್ರಕರಣಗಳ ಸಹಾಯದಿಂದ ಚರ್ಚಿಸಿರಿ.

Q. No. 2. Explain the meaning and scope of 'Nuisance'. What are the remedies available for a private nuisance ? Marks : 16

'ಉಪದ್ರವ' ದ ಅರ್ಥ ಮತ್ತು ವ್ಯಾಪ್ತಿಯನ್ನು ವಿವರಿಸಿ. ಖಾಸಗಿ ಉಪದ್ರವಕ್ಕೆ ದೊರೆಯುವ ಪರಿಹಾರೋಪಾಯಗಳು ಯಾವುವು ?

Q. No. 3. Explain the justifications for torts. Marks : 16

ಅಪಕೃತ್ಯಕ್ಕೆ ಇರುವ ಸಮರ್ಥನೆಗಳನ್ನು ವಿವರಿಸಿ.

P.T.O.

Q. No. 4. Discuss the essential elements of 'Malicious prosecution' by referring decided cases. Marks : 16

'ದುರ್ಭಾವನಾ ಪೂರ್ಣ ಅಭಿಯೋಗ'ದ ಅವಶ್ಯಕ ಘಟಕಗಳನ್ನು ನಿರ್ಧರಿಸಲ್ಪಟ್ಟ ಪ್ರಕರಣಗಳ ಸಹಾಯದೊಂದಿಗೆ ಚರ್ಚಿಸಿರಿ.

Q. No. 5. Define libel and distinguish it from slandar. Marks : 16

ಲಿಖಿತ ಮಾನಹಾನಿಯನ್ನು ವ್ಯಾಖ್ಯಾನಿಸಿ ಮತ್ತು ಮೌಖಿಕ ಮಾನಹಾನಿಯೊಂದಿಗೆ ವ್ಯತ್ಯಾಸಿಸಿ.

Q. No. 6. Explain the principles of strict liability laid down in Rylands V. Fletcher along with the exceptions to this rule. Marks : 16

ರೈಲಾಂಡ್ಸ್ ವಿ. ಫ್ಲೆಚರ್‌ನಲ್ಲಿ ನಿರೂಪಿಸಿದ ಕಟ್ಟುನಿಟ್ಟಿನ ಹೊಣೆಗಾರಿಕೆಯ ನಿಯಮವನ್ನು ಹಾಗೂ ಈ ನಿಯಮಕ್ಕೆ ಇರುವ ಅಪವಾದಗಳನ್ನು ವಿವರಿಸಿ.

Q. No. 7. Explain the growth and development of consumer law in India. Marks : 16

ಭಾರತದಲ್ಲಿ ಗ್ರಾಹಕ ಸಂರಕ್ಷಣಾ ಕಾನೂನಿನ ಬೆಳವಣಿಗೆ ಹಾಗೂ ಅಭಿವೃದ್ಧಿಯನ್ನು ವಿವರಿಸಿ.

Q. No. 8. Write short notes on **any two** of the following : Marks : 2×8=16

ಕೆಳಗಿನವುಗಳಲ್ಲಿ ಯಾವುದಾದರೂ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ :

a) Negligence

ನಿರ್ಲಕ್ಷತೆ

b) Kinds of damages

ವಿವಿಧ ನಷ್ಟ ಪರಿಹಾರಗಳು

c) Remedies under Motor Vehicle Act.

ಮೋಟಾರು ವಾಹನ ಕಾಯಿದೆಯಡಿಯಲ್ಲಿರುವ ಪರಿಹಾರಗಳು.

Q. No. 9. Solve **any two** of the following problems : Marks : 2×10=20

ಕೆಳಗಿನವುಗಳಲ್ಲಿ ಯಾವುದಾದರೂ **ಎರಡು** ಸಮಸ್ಯೆಗಳನ್ನು ಪರಿಹರಿಸಿ :

a) The Plaintiff was a Russian princess. The defendents produced a talking film called "Rusputin the Mad Monk". The Plaintiff alleged that in that film it was falsely imputed that she had been seduced by Rusputin, a man of vile character. Advise the Plaintiff.

ವಾದಿಯು ರಷ್ಯಾದ ರಾಜಕುಮಾರಿ. ಪ್ರತಿವಾದಿಗಳು 'ರಸ್‌ಪುಟೀನ್ ದಿ ಮ್ಯಾಡ್ ಮಾಂಕ್' ಎಂಬ ವಾಕೀ ಚಲನಚಿತ್ರವನ್ನು ತಯಾರಿಸಿದರು. ಅದರಲ್ಲಿ ವಾದಿಯನ್ನು ರಸ್‌ಪುಟೀನ್ ಎಂಬ ಚಾರಿತ್ರ್ಯಹೀನನು ಮಾನಭಂಗ ಮಾಡುವ ರೀತಿಯಲ್ಲಿ ತೋರಿಸಿದರು ಎಂದು ಆಪಾದಿಸಲಾಯಿತು. ವಾದಿಗೆ ಸಲಹೆ ಕೊಡಿ.

b) The Plaintiff's and defendant's dogs were fighting. The defendant was beating them in order to separate them, and the Plaintiff was looking. Defendant accidentally hit Plaintiff's eye causing severe injury. Is defendant liable for damage ? Solve.

ವಾದಿಯ ಮತ್ತು ಪ್ರತಿವಾದಿಯ ನಾಯಿಗಳು ಕಚ್ಚಾಡುತ್ತಿದ್ದವು. ಅವುಗಳನ್ನು ಬೇರೆ ಮಾಡಲು ಪ್ರತಿವಾದಿಯು ಅವುಗಳನ್ನು ಹೊಡೆಯುತ್ತಿದ್ದನು. ಆಗ ವಾದಿಯು ಅದನ್ನು ನೋಡುತ್ತಿದ್ದನು. ಪ್ರತಿವಾದಿ ಆಕಸ್ಮಿಕವಾಗಿ ವಾದಿಯ ಕಣ್ಣಿಗೆ ಹೊಡೆದನು. ಇದರಿಂದ ಅವನ ಕಣ್ಣಿಗೆ ಗಾಯವಾಯಿತು. ಇದಕ್ಕೆ ಪ್ರತಿವಾದಿಯು ನಷ್ಟ ಪರಿಹಾರ ನೀಡಲು ಬಾಧ್ಯನೆ ? ಪರಿಹರಿಸಿ.

c) 'A' a keeper of fair price shop. At the time of scarcity of kerosene a long queue of customers is formed in front of his shop. This disturbs the business of neighbouring shop keepers. Can they take legal action against 'A' ? Solve.

'ಎ' ಎಂಬುವನು ಒಂದು ನ್ಯಾಯ ಬೆಲೆ ಅಂಗಡಿ ಹೊಂದಿದ್ದನು. ಸೀಮೆ ಎಣ್ಣೆಯ ಕೊರತೆಯ ಸಮಯದಲ್ಲಿ ಅವನ ಅಂಗಡಿಯ ಮುಂದೆ ಗ್ರಾಹಕರ ಒಂದು ದೊಡ್ಡ ಸರತಿ ಸಾಲು ಉಂಟಾಯಿತು. ಇದರಿಂದಾಗಿ ಅಕ್ಕಪಕ್ಕದ ವ್ಯಾಪಾರಿಗಳಿಗೆ ತೊಂದರೆಯಾಯಿತು. ಅವರು 'ಎ'ನ ವಿರುದ್ಧ ಕಾನೂನು ಕ್ರಮವನ್ನು ತೆಗೆದುಕೊಳ್ಳಬಹುದೇ ? ಪರಿಹರಿಸಿ.